ವಿಷಯ :- 1995-96 ರ ವಿಶೇಷ ಘಟಕ ಯೋಜನೆಯಲ್ಲಿ ಬಿಡುಗಡೆಯಾದ ಹಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 821(1417)

ಶ್ರೀ ಕೆ. ಜಯರಾಮ್ ಶೆಟ್ಟಿ (ಉಳ್ಳಾಲ) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1995-96 ನೇ ಸಾಲಿನಲ್ಲಿ ರಾಜ್ಯದಲ್ಲಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಪ್ರತಿ ಜಿಲ್ಲೆಗಳಿಗೆ ಬಿಡುಗಡೆ ಮಾಡಿದ ಮೊತ್ತವೆಷ್ಟು?

ಆ) ಈ ಯೋಜನೆಯಡಿ ಉಪಯೋಗವಾಗದ ಅನುದಾನಗಳು ಮತ್ತು ಪೂರ್ತಿ ಮಾಡದ ಕಾಮಗಾರಿಗಳೆಷ್ಟು?

ಶ್ರೀ ಕೆ. ಎಂ. ಶ್ರೀ ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :-

ಅ) 1995-96 ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿ ರೂ. 3591.78 ಲಕ್ಷಗಳು ಬಿಡುಗಡೆಯಾಗಿದ್ದು ಪ್ರತಿ ಜಿಲ್ಲೆಗೆ ಬಿಡುಗಡೆಯಾದ ಮೊತ್ತದ ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.

ಆ) ಈ ಯೋಜನೆಯಡಿ ಉಪಯೋಗವಾಗದ ಹಣ ರೂ. 141.65 ಲಕ್ಷಗಳಾಗಿದ್ದು, ಪೂರ್ತಿ ಮಾಡದ ಕಾಮಗಾರಿಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-2 ರಲ್ಲಿ ತೋರಿಸಲಾಗಿದೆ.

ಅನುಬಂಧ - I

1995-96 ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿ ಬಿಡುಗಡೆಯಾದ ಹಣದ ವಿವರಗಳು

ರೂ. ಲಕ್ಷಗಳಲ್ಲಿ

ಕ್ರಮ ಸಂಖ್ಯೆ.	ಜಿಲ್ಲೆಯ ಹೆಸರು	ಬಿಡುಗಡೆಯಾದ ಹಣ
1.	ಬೆಂಗಳೂರು (ನಗರ)	100.23
2.	ಬೆಂಗಳೂರು (ಗ್ರಾಮಾಂತರ)	161.01
3.	ಚಿತ್ರದುರ್ಗ	147.48
4.	ಕೋಲಾರ	203.20
5.	ತುಮಕೂರು	200.12

6.	ಶಿವಮೊಗ್ಗ	190.37
7.	ಮೈಸೂರು	333.25
8.	ಮಂಡ್ಯ	141.18
9.	ಹಾಸನ	160.93
10.	ಚಿಕ್ಕಮಗಳೂರು	114.59
11.	ಕೊಡಗು	83.01
12.	ದಕ್ಷಿಣ ಕನ್ನಡ	223.54
13.	ಬೆಳಗಾಂ	200.35
14.	ಬಿಜಾಪುರ	142.30
15.	ಧಾರವಾಡ	218.63
16.	ಉತ್ತರ ಕನ್ನಡ	66.42
17.	ಗುಲ್ಬರ್ಗಾ	345.25
18.	ರಾಯಚೂರು	253.73
19.	ಬಳ್ಳಾರಿ	161.57
20.	ಬೀದರ್	144.62
	ಒಟ್ಟು	3591.78

ಅನುಬಂಧ - II

1995-96 ನೇ ಸಾಲಿನಲ್ಲಿ ಜಿಲ್ಲೆಗಳಲ್ಲಿ ಉಳಿದ ಹಣ ಹಾಗೂ ಪೂರ್ತಿಯಾಗದ ಕಾಮಗಾರಿಗಳ ವಿವರ

ರೂ. ಲಕ್ಷಗಳಲ್ಲಿ

ಕ್ರಮ.	ಜಿಲ್ಲೆಯ ಹೆಸರು	ಬಾಕಿ ಉಳಿದ ಹಣ	ಪೂರ್ತಿಯಾಗದ ಕಾಮಗಾರಿಗಳು	
1.	ಬೆಂಗಳೂರು (ನಗರ)	-	ಬಾಕಿ ಇರುವುದಿಲ್ಲ	
2.	ಬೆಂಗಳೂರು (ಗ್ರಾಮಾಂತರ)	-	25 ಕೆರು ನೀರು ಸರಬರಾಜು 48 ರಸ್ತೆ ಮತ್ತು ಸೇತುವೆ 22 ಕೊಳವೆ ಬಾವಿಗಳು	ಒಟ್ಟು 95

3.	ಚಿತ್ರದುರ್ಗ	-	ಬಾಕಿ ಇರುವುದಿಲ್ಲ.
4.	ಕೋಲಾರ	-	ಬಾಕಿ ಇರುವುದಿಲ್ಲ.
5.	ತುಮಕೂರು	9.90	ಬಾಕಿ ಇರುವುದಿಲ್ಲ.
6.	ಶಿವಮೊಗ್ಗ	7.71	25 ಕೊಳವೆ ಬಾವಿಗಳು. 17 ಕಿರು ನೀರು ಸರಬರಾಜು.
7.	ಮೈಸೂರು	23.62	---
8.	ಮಂಡ್ಯ	17.31	30 ಕಿರು ನೀರು ಸರಬರಾಜು. 3 ಭೂ ಸಂರಕ್ಷಣೆ ಕಾಮಗಾರಿಗಳು
9.	ಹಾಸನ	16.00	48 ಗ್ರಾಮೀಣ ನೀರು ಸರಬರಾಜು ಕಾಮಗಾರಿಗಳು.
10.	ಚಿಕ್ಕಮಗಳೂರು	15.37	14 ಗ್ರಾಮೀಣ ನೀರಾವರಿ ಕಾಮಗಾರಿ 10 ಕಿ.ಮಿ. ರಸ್ತೆ ಮತ್ತು ಸೇತುವೆ.
11.	ಕೊಡಗು	9.95	ಬಾಕಿ ಇರುವುದಿಲ್ಲ.
12.	ದಕ್ಷಿಣ ಕನ್ನಡ	29.12	54 ಕಿರು ನೀರು ಸರಬರಾಜು (94-95 ಕಾಮಗಾರಿಗಳು ಸೇರಿ) 32 ಸಾಮೂಹಿಕ ನೀರಾವರಿ ಬಾವಿ (94-95 ಕಾಮಗಾರಿಗಳು ಸೇರಿ) 48 ಮತ್ತು ಸೇತುವೆ --"--
13.	ಬೆಳಗಾಂ	-	100 ಕಾಮಗಾರಿಗಳು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಲ್ಲಿ.
14.	ಬಿಜಾಪುರ	-	137 ಜಿಲ್ಲಾ ಪಂಚಾಯತ್‌ನ ಇಂಜಿನಿಯರಿಂಗ್ ವಿಭಾಗಕ್ಕೆ ಸಂಬಂಧಿಸಿದ ಕಾಮಗಾರಿಗಳು.
15.	ಧಾರವಾಡ	1.22	7 ಕೊಳವೆ ಬಾವಿ ಕಾಮಗಾರಿಗಳು ಮಾರ್ಚ್ 96 ರಲ್ಲಿ ಪೂರ್ಣಗೊಳ್ಳಿಸಲಾಗಿದೆ.
16.	ಉತ್ತರ ಕನ್ನಡ	-	ಬಾಕಿ ಇರುವುದಿಲ್ಲ.
17.	ಗುಲ್ಬರ್ಗಾ	8.79	ಬಾಕಿ ಇರುವುದಿಲ್ಲ.

18. ರಾಯಚೂರು	7.71	13 ಕೊಳವೆ ಬಾವಿ ಕಾಮಗಾರಿಗಳು. 19 ಕಿರು ನೀರು ಸರಬರಾಜು. ಕಾಮಗಾರಿಗಳು. 109 ಭೂ ಸಂರಕ್ಷಣೆ.	30 ಸಣ್ಣ ಕೈಗಾರಿಕೆ ಕಾಮಗಾರಿಗಳು
19.ಬಳ್ಳಾರಿ	-	ಬಾಕಿ ಇರುವುದಿಲ್ಲ.	
20. ಬೀದರ್	2.66	ಬಾಕಿ ಇರುವುದಿಲ್ಲ.	
ಒಟ್ಟು	141.65		

ವಿಷಯ :- ಹುಬ್ಬಳ್ಳಿಯ ಹತ್ತಿರ ಜವಳಿ ನಗರದ ಸ್ಥಾಪನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 823 (755)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ- ಧಾರವಾಡ ಭಾಗದಲ್ಲಿ ಸ್ಥಾಪಿಸಬೇಕೆಂದಿರುವ ಜವಳಿ ನಗರದ ಅನುಷ್ಠಾನದ ಕಾರ್ಯಚಟುವಟಿಕೆ ಈಗ ಯಾವ ಹಂತದಲ್ಲಿ ಇದೆ? ಇನ್ನು ಎಷ್ಟು ನಿರ್ದಿಷ್ಟ ಅವಧಿಯಲ್ಲಿ ಈ ಜವಳಿ ನಗರ ಸ್ಥಾಪನೆ ಕೆಲಸ ಪ್ರಾರಂಭವಾಗುವುದು?

ಶ್ರೀ ಎಂ. ಎಸ್. ಪಾಟೀಲ್ (ಜವಳಿ ಸಚಿವರು) :-

ಅ) ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ ಸಿಐ 223 ಸಿಟಿಹೆಚ್ 94 ದಿನಾಂಕ 1-3-1996 ರಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಗೆ ವಹಿಸಿದೆ. ಈ ಬಗ್ಗೆ ಟೆಕ್ಸಾಕ್ ಸಂಸ್ಥೆಯಿಂದ 200 ಎಕರೆ ಜಮೀನನ್ನೊಳಗೊಂಡ ಪ್ರದೇಶಕ್ಕನುಗುಣವಾಗಿ ಯೋಜನಾ ವರದಿಯನ್ನು ತಯಾರಿಸಿ, ಕೆಐಎಡಿಬಿ ಇವರಿಗೆ ಸಲ್ಲಿಸಲಾಗಿದೆ. ಜವಳಿ ನಗರ ಸ್ಥಾಪಿಸಲು ನಿರ್ದಿಷ್ಟ ಜಮೀನನ್ನು ಗುರುತಿಸುವ ಕೆಲಸ ನಡೆದಿದೆ.

ಜಮೀನು ದೊರೆತ ಕೂಡಲೇ ಜವಳಿ ನಗರ ಸ್ಥಾಪನೆಯನ್ನು ಕೈಗೆತ್ತಿಕೊಂಡು ಪೂರ್ಣವಾದ ನಂತರ ಫಲಾನುಭವಿಗಳಿಗೆ ಜವಳಿ ಉದ್ಯಮ ಸ್ಥಾಪಿಸಲು ನೀಡಲಾಗುವುದು.